<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.***1516/2022***</u>

ಚಾಸಾ-01 ಫ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 08.01.2025

| | | |
|---|---|---|
| ಹೆಸರು | : | ಶಾರದಾಬಾಯಿ |
| ಗಂಡನ ಹೆಸರು | : | ಅಂಬರಾಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಗೌಡಗಾಂವ ಗ್ರಾಮ ತಾ ಅಫಜಲಪೂರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಚಾಸಾ-4 ರವರ ಪರಿಚಯ ಇರುತ್ತಾರೆ. ನ್ಯಾಯಾಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ.

ಆರೋಪಿತರ ಮತ್ತು ನನ್ನ ಮನೆ ಅಕ್ಕ-ಪಕ್ಕ ಇರುತ್ತವೆ. ನಮ್ಮ ಮನೆಗಳ ಮಧ್ಯ ಇರುವ ಸಂದಿಯಲ್ಲಿ ನೀರು ಹೋಗಲು ದಾರಿ ಇದ್ದು, ಆರೋಪಿತರ ಮನೆಯ ಕಡೆ ಸಂದಿಯನ್ನು ಎತ್ತರವಾಗಿ ಮಾಡಿದ್ದು, ಅದರಂತೆ ನಾನು ಕೂಡಾ ಸಂದಿಯನ್ನು ಎತ್ತರವಾಗಿ ಮಾಡಿರುತ್ತೇನೆ. ಅದಕ್ಕಾಗಿ ನೀನು ಸಂದಿಯನ್ನು ಏಕೆ ಎತ್ತರ ಮಾಡಿದ್ದಿ ಅಂತಾ ಆರೋಪಿತರು ನನ್ನೊಂದಿಗೆ ಜಗಳ ತೆಗೆದು ಬಡಿಗೆಯಿಂದ ಹೊಡೆ-ಬಡೆ ಮಾಡಿರುತ್ತಾರೆ. ಸಂದಿ ಕಡೆಗೆ ಹೋದಾಗ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನ್ನ ತಲೆಯ ಕೂದಲು ಹಿಡಿದು ಕುಕ್ಕಿರುತ್ತಾರೆ. ಚಾಸಾ-4 ರವರು ಬಂದು ಜಗಳ ಬಿಡಿಸಿರುತ್ತಾರೆ.

ಆ ನಂತರ ನಾನು ಆಸ್ಪತ್ರೆ ಹೋಗಿ ದಾಖಲಾಗಿರುತ್ತೇನೆ. ಆ ನಂತರ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**1** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ **SJG** ವಕೀಲರಿಂದಃ-</u>

ಜಗಳ ಯಾವ ದಿನಾಂಕಂದು ಆಯಿತು ಎಂದು ನನಗೆ ಹೇಳಲು ಬರುವುದಿಲ್ಲಾ. ನನ್ನ ಮತ್ತು ಆರೋಪಿತರ ನಡುವೆ ಜಾಗದ ಮಧ್ಯ ಇರುವ ಸಲುವಾಗಿ ಜಗಳ ಇರುತ್ತದೆ ಎಂದರೆ ಸರಿ. ಆರೋಪಿತರು ಬೆಂಗಳೂರಿನಲ್ಲಿ ಇರುತ್ತಾರೆ ಎಂದರೆ ಸರಿ. ಆರೋಪಿತರ ಮೇಲೆ ಇರುವ ವೈಮನಸ್ಸಿನಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವತು ನನ್ನೊಂದಿಗೆ ಜಗಳ ಮಾಡಿಲ್ಲಾ, ಕೂದಲು ಹಿಡಿದು ಏಳೆದಾಡಿಲ್ಲಾ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಸುಳ್ಳು ದೂರು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ